ದಿನಾಂಕಃ 18.07.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಶ್ರೀ ಹೆಚ್.ಕೆ.ಆರ್. ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯನ್ನು ಲಿಖಿತವಾಗಿ ಪ್ರಮಾಣ ಪತ್ರದಲ್ಲಿ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ವಿಷಯಗಳು ನನಗೆ ತಿಳಿದಿದೆ ಮತ್ತು ಸತ್ಯವಾಗಿರುತ್ತದೆ. ಅದರ ಪ್ರತೀ ಪುಟಕ್ಕೂ ನಾನೇ ರುಜು ಮಾಡಿರುತ್ತೇನೆ.

ಸಾಕ್ಷಿಯು ಈ ಕೆಳಕಂಡ ದಾಖಲೆಗಳನ್ನು ಹಾಜರು ಮಾಡಿದ್ದು ಅವುಗಳನ್ನು ಈ ಕೆಳಕಂಡಂತೆ ನಿಶಾನೆಯಾಗಿ ಗುರುತಿಸಲಾಗಿದೆ.

| ಕ್ರ. ಸಂ. | ದಾಖಲಾತಿಗಳು | ನಿಶಾನೆಗಳು |
|---|---|---|
| 1 | ಅಲಭ್ಯ ಪ್ರಮಾಣ ಪತ್ರ | ನಿಪಿ-1 |
| 2 | ವಂಶವೃಕ್ಷ ಪ್ರಮಾಣ ಪತ್ರ | ನಿಪಿ-2 |
| 3 | ಸಾಕ್ಷಿದಾರರುಗಳ ಆಧಾರ್ ಕಾರ್ಡ್ ಗಳ ನೋಟರಿ ದೃಢೀಕೃತ ನಕಲು(ಮೂಲ ಪ್ರತಿಯೊಂದಿಗೆ ತುಲನೆ ಮಾಡಿ ನೋಡಲಾಗಿ) | ನಿಪಿ-3 ಮತ್ತು 4 |
| 4 | ದಿ.02.07.2026 ರಂದು ಮಲೆನಾಡು ನಕ್ಷತ್ರ ಹಾಗೂ ಜಿಲ್ಲಾ ಸುದ್ಧಿ ಮಾಧ್ಯಮ ದಿನಪತ್ರಿಕೆಗಳಲ್ಲಿ ಪ್ರಕರಟಣೆಗೊಂಡ ಪತ್ರಿಕಾ ಪ್ರಕಟಣೆಗಳು | ನಿಪಿ-5 ಮತ್ತು 6 |

**ಪಾಟೀ ಸವಾಲುಃ 3 ನೇ ಎದುರುದಾರರ ಪರ ಶ್ರೀ ಎಂ.ವಿ.ಜೆ. ವಕೀಲರಿಂದಃ**

ನಾನು ಡಿಗ್ರಿ ಪಧವೀಧರ. ನನ್ನ ತಂದೆಗೆ ಸೇರಿದ ಜಮೀನಿನ ಖಾತೆ ಬದಲಾವಣೆಗಾಗಿ ಮರಣ ಪ್ರಮಾಣ ಪತ್ರವನ್ನು ಕೋರಿ ಅರ್ಜಿಯನ್ನು ಸಲ್ಲಿಸಿರುತ್ತೇನೆ. ನನ್ನ ತಂದೆಗೆ ಸದರಿ ಜಮೀನು ಮಂಜೂರು ಆಗಿರುತ್ತದೆ. ನಾನು ಖಾತೆ ಬದಲಾವಣೆಗೆ ಕೋರುತ್ತಿರುವ ಜಮೀನು ನನ್ನ ಅಜ್ಜನಿಗೆ ಮಂಜೂರು ಆಗಿರುತ್ತದೆ ಎಂದರೆ ಸರಿಯಲ್ಲ. ಪ್ರಸ್ತುತ ಅರ್ಜಿಯಲ್ಲಿ ನನ್ನ ತಂದೆಯ ಮರಣ ಪ್ರಮಾಣ ಪತ್ರವನ್ನು ಕೋರಿರುವುದಿಲ್ಲ. ಪ್ರಸ್ತುತ ಅರ್ಜಿಯಲ್ಲಿ ನನ್ನ ಅಜ್ಜಿಯ ಮರಣ ಪ್ರಮಾಣ ಪತ್ರವನ್ನು ಕೋರಿರುತ್ತೇನೆ. ನನ್ನ ಅಜ್ಜ ಬದುಕಿರುವುದಿಲ್ಲ. ಸದರಿಯವರ ಮರಣ ಪ್ರಮಾಣ ಪತ್ರ ನನ್ನ ಬಳಿ ಇರುವುದಿಲ್ಲ. ಪ್ರಸ್ತುತ ಅರ್ಜಿಯಲ್ಲಿ ಅಜ್ಜ ಮರಣ ಹೊಂದಿರುವ ಬಗ್ಗೆ ನಮೂದು ಮಾಡಿರುವುದಿಲ್ಲ. ಯಾವ ಸ.ನಂ. ಜಮೀನಿನ ಖಾತೆ ಬದಲಾವಣೆಗೆ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದುನ ತಿಳಿದಿರುವುದಿಲ್ಲ. ಸದರಿ ಜಮೀನಿನ ವಿಸ್ತೀರ್ಣವು ತಿಳಿದಿರುವುದಿಲ್ಲ. ಯಾವ ಜಮೀನಿನ ಖಾತೆ ಬದಲಾವಣೆಗೆ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದು ವಿವರಿಸಿರುವುದಿಲ್ಲ. 2 ನೇ ಪ್ರತಿವಾದಿಯವರು ನನ್ನ ಅತ್ತೆ. 3 ನೇ ಪ್ರತಿವಾದಿಯವರು ನನ್ನ ಚಿಕ್ಕಪ್ಪ. 4 ನೇ ಪ್ರತಿವಾದಿಯವರು ನನ್ನ ಅತ್ತೆ. ಒಂದು ವೇಳೆ ನನ್ನ ತಂದೆಯ ಹೆಸರಿನಲ್ಲಿರುವ ಖಾತೆಯನ್ನು ನಮ್ಮ ಹೆಸರಿಗೆ ಬದಲಾಯಿಸಿಕೊಳ್ಳುವುದಕ್ಕೆ ನನ್ನ ಅಜ್ಜಿಯ ಮರಣ ಪ್ರಮಾಣ ಪತ್ರದ ಅವಶ್ಯಕತೆ

ಇರುವುದಿಲ್ಲ ಎಂದರೆ ಸಾಕ್ಷಿಯು ಇದೆ ಎಂದು ನುಡಿಯುತ್ತಾರೆ.

ನನ್ನ ತಂದೆಯ ಹೆಸರಿನಲ್ಲಿರುವ ಖಾತೆಯನ್ನು ಬದಲಾಯಿಸಿಕೊಡಲು ನನ್ನ ಅಜ್ಜಿಯ ಮರಣ ಪ್ರಮಾಣ ಪತ್ರದ ಅವಶ್ಯಕತೆ ಇದೆ ಎಂದು ನೀಡಿರುವ ಹಿಂಬರಹವನ್ನು ನಾನು ಈ ಅರ್ಜಿಯಲ್ಲಿ ಹಾಜರು ಮಾಡಿರುವುದಿಲ್ಲ. ನಾನು ಈ ಅರ್ಜಿಯಲ್ಲಿ ಖಾತೆ ಬದಲಾವಣೆಗೆ ಮರಣ ಪ್ರಮಾಣ ಪತ್ರವನ್ನು ಕೇಳಿರುವ ಜಮೀನು ಮೂಲತಃ ನನ್ನ ಅಜ್ಜನಿಗೆ ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಅಜ್ಜನ ಮರಣದ ನಂತರ ಸದರಿ ಜಮೀನು ನನ್ನ ಅಜ್ಜಿಯ ಹೆಸರಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ನನ್ನ ಅಜ್ಜ ಮತ್ತು ಅಜ್ಜಿ ಮರಣ ಹೊಂದಿದ ನಂತರ ನನ್ನ ತಂದೆ ಸದರಿಯವರ ಮೊದಲನೇ ಮಗನಾದ ಕಾರಣ, ನನ್ನ ತಂದೆಗೆ ಜಮೀನಿನ ಖಾತೆ ಬಂದಿರುತ್ತದೆ ಎಂದರೆ ಸರಿಯಲ್ಲ. ಆದ ಕಾರಣ ನಾನು 2 ನೇ ಅರ್ಜಿದಾರರ ಹೆಸರಿಗೆ ಖಾತೆ ಮಾಡಿಕೊಡುವಂತೆ ಕೇಳಿಕೊಂಡಿರುತ್ತೇನೆ ಎಂದರೆ ಸರಿ. ನನ್ನ ತಾಯಿ ವಿದ್ಯಾಭ್ಯಾಸ ಪಡೆದಿರುವುದಿಲ್ಲ. 2 ರಿಂದ 4 ನೇ ಪ್ರತಿವಾದಿಯವರು ನಮ್ಮೊಟ್ಟಿಗೆ ಒಳ್ಳೆಯ ಬಾಂಧವ್ಯದಿಂದ ಇರುತ್ತಾರೆ. ಒಂದು ವೇಳೆ ಸದರಿಯವರು ನಮ್ಮೊಟ್ಟಿಗೆ ಒಳ್ಳೆ ಬಾಂಧವ್ಯದಲ್ಲಿ ಇದ್ದಿದ್ದರೆ ಅವರನ್ನು ಅರ್ಜಿದಾರರಾಗಿ ನಮೂದಿಸುತ್ತಿದ್ದೆ ಎಂದರೆ ಸಾಕ್ಷಿಯು ಅರ್ಜಿದಾರರನ್ನಾಗಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿಯವರನ್ನು ನಾನು ಎದುರುದಾರರನ್ನಾಗಿ ತೋರಿಸಿರುತ್ತೇನೆ ಎಂದರೆ ಸರಿಯಲ್ಲ.

ಅರ್ಜಿಯ ಮರಣದ ದಿನಾಂಕವು ಅವರ ಫೋಟೋದಲ್ಲಿ ನಮೂದಾಗಿತ್ತು. ಅದೇ ದಿನಾಂಕ ನನ್ನ ಅಜ್ಜಿ ಮರಣ ಹೊಂದಿರುತ್ತಾರೆ ಎಂಬುದರ ಬಾಬ್ತು ಯಾವುದೇ ದಾಖಲಾತಿ ಹಾಜರು ಮಾಡಿರುವುದಿಲ್ಲ. ನನ್ನ ಅಜ್ಜಿಗೆ ಹೆಣ್ಣು ಮಕ್ಕಳು ಮತ್ತು ಗಂಡು ಮಕ್ಕಳು ಇರುತ್ತಾರೆ ಎಂದರೆ ಸರಿ. ಒಂದು ವೇಳೆ ನನ್ನ ಅಜ್ಜಿಯ ಮರಣ ಪ್ರಮಾಣ ಪತ್ರದ ಅವಶ್ಯಕತೆ ಇದ್ದಲ್ಲಿ ನನ್ನ ದೊಡ್ಡಪ್ಪ, ಚಿಕ್ಕಪ್ಪ ಮತ್ತು ಅತ್ತೆಯವರು ಅರ್ಜಿಯನ್ನು ಸಲ್ಲಿಸುತಿದ್ದರು ಎಂದರೆ ಸರಿ. ಪ್ರಸ್ತುತ ಅರ್ಜಿಯಲ್ಲಿ ನನ್ನ ಅಜ್ಜಿಯ ಮರಣ ಪ್ರಮಾಣ ಪತ್ರವನ್ನು ಕೋರಲು ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನನ್ನ ಅಜ್ಜಿಯ ಹೆಸರಿನಲ್ಲಿ ಇರುವ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಈ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಕೇಳಿರುವ ಅರ್ಜಿಯ ಪರಿಹಾರವನ್ನು ನೀಡದಿದ್ದಲ್ಲಿ ನನಗೆ ಯಾವುದೇ ತೊಂದರೆ ಆಗುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.